**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 23.11.2024**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

1. ದಾವೆ ಸಲ್ಲಿಸಿರುವ ಸ್ವತ್ತುಗಳಿಗೆ ಸಂಬಂಧಿಸಿದ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ದಾವಾ ಐಟಂ 3 ರಿಂದ 5, 2 ನೇ ಪ್ರತಿವಾದಿ ಹೆಸರಿಗೆ ಮರಣ ಶಾಸನ ಪತ್ರದ ಮೂಲಕ ಖಾತೆ ಬಂದಿದೆ ಎಂದರೆ ಸರಿಯಲ್ಲ, ಸಾಕ್ಷಿ ಸುಳ್ಳು ದಾಖಲೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ತಿಮ್ಮಶೆಟ್ಟಿ ಬಿನ್ ಲೇ ಪುಟ್ಟಶೆಟ್ಟಿ ಮತ್ತು ಸಾಕಮ್ಮ ದಂಪತಿಗಳು ಸಾವಿತ್ರಮ್ಮರವರನ್ನು ಮಗಳಾಗಿ ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹೆಸರಿಗೆ ಎಂ.ಆರ್. 5/1992 ರ ಪ್ರಕಾರ ಖಾತೆ ಆಗಿದೆ ಎಂದರೆ ಸರಿಯಲ್ಲ. ಖಾತೆ ಮಾಡಿರುವ ದಾಖಲೆಯನ್ನು ನೀವೆ ಕೊಟ್ಟಿದ್ದರು, ಖಾತೆ ಆಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1993 ರ ನಂತರ 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳುಗಳು ಐಟಂ 3 ರಿಂದ 5 ರ ಸ್ವತ್ತುಗಳಲ್ಲಿ ಅನುಭವ ಮತ್ತು ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ನಾನೇ ಇರುತ್ತೇನೆ ಎಂದು ಹೇಳುತ್ತಾರೆ. ಆ ಮನೆಯ ವಿದ್ಯುಚ್ಛಕ್ತಿ ಯಾರ ಹೆಸರಿನಲ್ಲಿದೆ ಎಂದರೆ ಅದಕ್ಕೆ ಕರೆಂಟ್ ಇಲ್ಲ ಎಂದು ಹೇಳುತ್ತಾರೆ.

2. ನಮ್ಮ ತಂದೆ ಅಣ್ಣಯ್ಯಶೆಟ್ಟಿರವರಿಗೆ 5,6 ಎಕರೆ ಆಸ್ತಿ ಇತ್ತು. ನಮ್ಮ ತಂದೆ ಹೆಸರಿಗೆ ಆಸ್ತಿ ಬದಲಾವಣೆ ಆಗಿರಲಿಲ್ಲ. ನಿಮ್ಮ ತಂದೆಯವರಿಗೆ 5,6 ಎಕರೆ ಇತ್ತು, ಸಾಗುವಳಿ ಮಾಡುತ್ತಿದ್ದರು ವಾದ ಪತ್ರ , ಪ್ರಮಾಣ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 2 ನೇ

ಪ್ರತಿವಾದಿಯನ್ನು ನೋಡಿದ್ದೀರ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಗೆ ಬೇಬಿ ಗ್ರಾಮದಲ್ಲಿ ವಾಸದ ಮನೆ ಮತ್ತು ವ್ಯವಸಾಯದ ಜಮೀನು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ವಿಸ್ತೀರ್ಣ, ಚಕ್ಕುಬಂಧಿಯನ್ನು ಅವಿಧ್ಯಾವಂತ ಆದ್ದರಿಂದ ನನ್ನಿಂದ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳಲ್ಲಿ ನೀವು ಯಾವತ್ತು ಸ್ವಾದೀನದಲಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ 3 ರಿಂದ 5 ರ ಆಸ್ತಿಗಳಿಗೂ ನಿಮಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಹೊಂದಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಿ ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**